

## ತಾಂಬೂಲ ಪೆಟ್ಟಿಗೆ

ಮರದ ಹಲಗೆಯಿಂದ ಕೆತ್ತಿ ತಯಾರಿಸಿದ ಎಲೆ–ಅಡಿಕೆ ಪೆಟ್ಟಿಗೆಯು ನೋಡಲು ತುಂಬಾ ಸೊಗಸಾಗಿದೆ. ಅದಕ್ಕೆ ವೃತ್ತಾಕಾರವಾಗಿ ಕೊರೆದು ಮುಚ್ಚಿದಾಗಲೂ ಸಹ ಒಳಗಿನ ವಸ್ತು ಕಾಣುವಂತೆ ಪಾರದರ್ಶಕ ಗಾಜು ಅಳವಡಿಸಿದ್ದು ಜೊತೆಗೆ ಭದ್ರವಾಗಿ ಚಿಲಕ ಅಳವಡಿಸಲಾಗಿದೆ.

ಈ ತಾಂಬೂಲ ಪೆಟ್ಟಿಗೆಯು ಹೊಸನಗರ ತಾಲ್ಲೂಕಿನ ಹುಂಚದ ಶಿಕ್ಷಕ ಈರಾ ನಾಯ್ಕರವರ ಮನೆಯಲ್ಲಿದೆ.

**ಚಿತ್ರ-ಬರಹ: ನಾ.ನಾ. ಜೆ.ಟಿ.ಕಟ್ಟೆ, ಶಿಕಾರಿಪುರ**

## ಮಹಾ ‘ಶಂಖ’

ಇಲ್ಲಿ ಕಾಣುತ್ತಿರುವುದು ಇಡಗುಂಜಿಯ ಹತ್ತಿರವಿರುವ ‘ಶ್ರೀ ಗಣೇಶ ಉದ್ಯಾನವನ’ದಲ್ಲಿ ಇರುವ ಶಂಖದ ಆಕಾರದಲ್ಲಿ ರಚಿಸಲಾದ ಕಲಾಕೃತಿ. ಶಂಖವನ್ನು ಹೋಲುವ ಈ ಕಲಾಕೃತಿ ಒಳಗೆ ಮಕ್ಕಳಿಗಾಗಿ ಜಾರುಬಂಡಿಯನ್ನು ನಿರ್ಮಿಸಲಾಗಿದ್ದು ಆಟ ಆಡಲು ರಚಿಸಲಾಗಿದೆ. ಈ ಉದ್ಯಾನವನದಲ್ಲಿ ಇನ್ನೂ ಅನೇಕ ಇಂತಹ ರಚನೆಗಳಿದ್ದು ಮನಸ್ಸಿಗೆ ಮುದ ನೀಡುವಂತಿವೆ.

**ಶ್ರೀಶೈಲ ಎಸ್. ಅಂಗಡಿ, ಬೆಳಗಾವಿ**





## ತೊಗರಿ ‘ಮರ’ವಾಗಿದೆರೀ!

ತಾನು ಬಿಟ್ಟ ತೊಗರಿ ಬೇಳೆಯ ಬೆಲೆ ಗಗನಮುಖಿಯಾಗಿರುವಾಗ ತಾನೇಕೆ ನಾಲ್ಕೈದು ಅಡಿ ಎತ್ತರವಾಗಿರಬೇಕೆಂದು ಬಯಸಿ 15 ಅಡಿಗೂ ಮಿಕ್ಕಿ ಎತ್ತರದ ಮರವಾಗಿ ಬೆಳೆದಿದೆ ಈ ತೊಗರಿ ಗಿಡ! ಸಾಮಾನ್ಯವಾಗಿ ವಾರ್ಷಿಕ ಬೆಳೆಯಾದ, ನಾಲ್ಕೈದು ಅಡಿ ಎತ್ತರ ಬೆಳೆಯುವ ಲೆಗ್ಯೂಮಿನಸ್ ಜಾತಿಗೆ ಸೇರಿದ ಈ ಸಸ್ಯ ಈ ರೀತಿಯಾಗಿ ಮೂರು ವರ್ಷದಿಂದಲೂ ಬೆಳೆಯುತ್ತ ಫಸಲು ನೀಡುತ್ತ ರಸ್ತೆಯಲ್ಲಿ ಹೋಗುವವರನ್ನು ಆಶ್ಚರ್ಯ ಪಡಿಸುತ್ತಿದೆ. ನಮ್ಮ ಮನೆಯಂಗಳದ ಬಳಿಯ ವಿದ್ಯುತ್ ಕಂಬದ ಬುಡದಲ್ಲಿ ಇದು ಬೆಳೆದಿದೆ.

**ಚಿತ್ರ-ಬರಹ: ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ**